ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 09-11-1969.

(ओम शान्ति, बापदादा. अव्यक्त मुरली 09-11-1969)

***ಭವಿಷ್ಯವನ್ನು ತಿಳಿಯುವ ಯುಕ್ತಿಗಳು*** (ದೀಪಾವಳಿಯ ಶುಭ ದಿನದಂದು)

(भविष्य को जानने की युक्तियाँ)

ಬಾಪ್ ದಾದಾ ಒಂದೊಂದು ದೀಪವನ್ನು ಏಕಕಾಲದ ದೃಷ್ಟಿಯಿಂದ ನೋಡುತ್ತಿರುವರೋ ಅಥವಾ ಮೂರು ಕಾಲಗಳ ದೃಷ್ಟಿಯಿಂದ ನೋಡುತ್ತಿರುವರೋ? ತಂದೆಯಂತೂ ತ್ರಿಕಾಲದರ್ಶಿ ಅಥವಾ ದಾದಾರವರೂ ತ್ರಿಕಾಲದರ್ಶಿಯೋ? ತಾವೂ ತ್ರಿಕಾಲದರ್ಶಿಯಾಗಿರುವಿರಾ ಅಥವಾ ಆಗುತ್ತಿರುವಿರಾ? ತ್ರಿಕಾಲದರ್ಶಿಯಾದರೆ ಭವಿಷ್ಯವನ್ನು ನೋಡುತ್ತೀರಾ ಅಥವಾ ತಿಳಿಯುತ್ತೀರಾ? ನಾನು ಏನಾಗುತ್ತೇನೆ ಎಂದು ತಿಳಿದಿದ್ದೀರಾ? ಪಾಂಡವ ಸೇನೆಯವರು ತಮ್ಮ ಭವಿಷ್ಯವನ್ನು ತಿಳಿದಿದ್ದೀರಾ? ಅಥವಾ ನಾನು ಏನಾಗುವೆನೆಂದು ಮತ್ತು ಯಾವ ರಾಜಧಾನಿಯಲ್ಲಿ ಬರುವೆನು ಎಂಬುದು ಸ್ಪಷ್ಟವಾಗಿದೆಯಾ? ತಾವು ಹೇಗೆ ಮುಂದುವರೆಯುತ್ತಿರೋ ಹಾಗೆ ತಮ್ಮ ಭವಿಷ್ಯದ ನಾಮ-ರೂಪ-ದೇಶ-ಕಾಲ ನಾಲ್ಕೂ ಸ್ಪಷ್ಟವಾಗುವವು. ಯಾವ ದೇಶದಲ್ಲಿ ಯಾವ ಹೆಸರಿನಿಂದ ಯಾವ ರೂಪದಲ್ಲಿ ಮತ್ತು ಯಾವ ಸಮಯ, ಮೊದಲ ರಾಜಧಾನಿಯಲ್ಲಿಯೂ ಏನಾಗುವಿರಿ, ಎರಡನೆಯ ರಾಜಧಾನಿಯಲ್ಲಿ ಏನಾಗುವಿರಿ ಎಂಬ ಪೂರ್ಣ ಜನ್ಮ ಪತ್ರಿಕೆ ಒಬ್ಬೊಬ್ಬರಿಗೂ ತಮ್ಮಲ್ಲಿಯೇ ಸ್ಪಷ್ಟವಾಗುವುದು. ಬಾಪ್ ದಾದಾ ಯಾರನ್ನೇ ನೋಡಿದರೂ ಮೊದಲು ಏನಾಗಿದ್ದರು, ಈಗ ಏನಾಗಿದ್ದಾರೆ ನಂತರ ಭವಿಷ್ಯದಲ್ಲಿ ಏನಾಗುವರು ಎಂದು ಮೂರೂ ಕಾಲಗಳನ್ನು ನೋಡುತ್ತಿದ್ದರು. ಒಂದೊಂದು ದೀಪದಲ್ಲಿ ಈ ಮೂರೂ ಕಾಲಗಳನ್ನು ನೋಡುತ್ತಿದ್ದರು. ನಾವು ಮೊದಲು ಏನಾಗಿದ್ದೆವು ಮತ್ತು ಈಗ ಏನಾಗಿದ್ದೇವೆ ಎಂಬ ಎರಡು ಕಾಲಗಳನ್ನು ಸ್ಪಷ್ಟವಾಗಿ ನೀವು ತಿಳಿದಿದ್ದೀರಿ. ಆದರೆ ಎಷ್ಟು ಯೋಗಯುಕ್ತರಾಗುವಿರೋ ಅಷ್ಟು ಭವಿಷ್ಯದಲ್ಲಿ ಏನಾಗಬೇಕು ಎಂಬುದು ಸ್ಪಷ್ಟವಾಗಿ ತಿಳಿಯುವುದು. ಹೇಗೆ ವರ್ತಮಾನ ಸ್ಪಷ್ಟವಾದಾಗ ಇದು ಇದೆಯೋ ಇಲ್ಲವೋ/ಏನಿದೆಯೋ ಗೊತ್ತಿಲ್ಲ ಎಂಬ ಸಂಕಲ್ಪ ಎಂದೂ ಬರುವುದಿಲ್ಲ. ಆದರೆ ಭವಿಷ್ಯ ಸ್ಪಷ್ಟವಾಗುವುದು. ಈ ರೀತಿಯ ಸ್ಪಷ್ಟ ನಶೆ ಪ್ರತಿಯೊಬ್ಬರ ಬುದ್ಧಿಯಲ್ಲಿ ನಂಬರವಾರ್ ಬರುವುದು. ಸಾಕಾರ ರೂಪದಲ್ಲಿ ತಂದೆ-ತಾಯಿಗೆ ತಮ್ಮ ಭವಿಷ್ಯ ಸ್ಪಷ್ಟವಾಗಿತ್ತು. ಮತ್ತು ಯಾವ ಸಂಬಂಧದಲ್ಲಿ ಬರುವೆವು, ಯಾವ ರೂಪದಲ್ಲಿ, ಯಾವ ಸಂಬಂಧಗಳು ಸ್ಪಷ್ಟವಾಗಿ ಬರುವುವು ಎಂಬುದು ಸ್ಪಷ್ಟವಾಗಿದ್ದವು. ಈಗ ಕೆಲವರಿಗೆ ಅಲ್ಪಸ್ವಲ್ಪ ಬರುತ್ತದೆ ಆದರೆ ಸ್ವಲ್ಪ ಸಮಯದ ನಂತರ ಹೀಗೆಯೇ, ಈ ರೀತಿ ಆಗಲೇಬೇಕು ಎಂದು ನಿಶ್ಚಯ ಬುದ್ಧಿಯವರಾಗಿ ಹೇಳುವಿರಿ. ಈಗ ನೀವು ಹೇಳಿದರೆ ಬೇರೆಯವರು ನಿಶ್ಚಯ ಮಾಡುವರೋ ಇಲ್ಲವೋ ಆದರೆ ಸ್ವಲ್ಪ ಸಮಯದಲ್ಲಿ ತಮ್ಮ ನಡೆನುಡಿ, ಪುರುಷಾರ್ಥಗಳು ಭವಿಷ್ಯದ ಚಿತ್ರವನ್ನು ಪ್ರಸಿದ್ಧ ಮಾಡುವವು. ಈಗ ವರ್ತಮಾನದ ಪುರುಷಾರ್ಥ ಮತ್ತು ಭವಿಷ್ಯದ ಪ್ರಾಪ್ತಿಯಲ್ಲಿ ಅಂತರವಿದೆ. ಆದರೆ ಹೇಗೆ ಸಮಯ ಮತ್ತು ತಮ್ಮ ಪುರುಷಾರ್ಥ ಸಮಾನವಾಗುವುದೋ ಆಗ ಯಾರಿಗೂ ಸಂಕಲ್ಪ ಬರುವುದಿಲ್ಲ.

ತಾವೆಲ್ಲರೂ ದೀಪಾವಳಿ ಆಚರಣೆಯನ್ನು ಮಾಡಿದ್ದೀರಾ, ದೀಪಾವಳಿಯಂದು ಏನು ಮಾಡುತ್ತಾರೆ? ಒಂದು ದೀಪದಿಂದ ಅನೇಕ ದೀಪಗಳನ್ನು ಹಚ್ಚುತ್ತಾರೆ. ಆದ್ದರಿಂದ **ಅನೇಕರ ಸಂಲಗ್ನತೆಯನ್ನು ಒಬ್ಬ ತಂದೆಯೊಂದಿಗೆ ಜೋಡಿಸುವಂತೆ ಮಾಡುವುದೇ ದೀಪಾವಳಿ.** ಒಂದೊಂದು ದೀಪದ ಸಂಲಗ್ನತೆಯನ್ನು(ಸಂಬಂಧ) ಒಂದೇ ದೀಪದೊಂದಿಗೆ ಜೋಡಣೆ ಮಾಡಿಸುವುದೇ ದೀಪಾವಳಿ. ದೀಪದಲ್ಲಿ ಏನಿದೆ? ಅಗ್ನಿ, ಅರ್ಥಾಥ್ ಸಂಲಗ್ನತೆ. ಆಳವಾದ ಸಂಲಗ್ನತೆಯಿದ್ದರೆ ಅಗ್ನಿ ಇದ್ದಂತೆ, ಇಲ್ಲದಿದ್ದರೆ ಅಗ್ನಿಯೂ ಇಲ್ಲದಂತೆ. ನಾವು ದೀಪಗಳು ಗಾಢ ಸಂಬಂಧದಿಂದ ಅಗ್ನಿಯಾಗಿದ್ದೇವಾ ಎಂಬುದನ್ನು ನೋಡಬೇಕು.? ಜಗತ್ತಿನಲ್ಲಿ

ಪ್ರಸಿದ್ಧವಾಗಿರುವಂತಹ ಎಷ್ಟು ಪ್ರಕಾರದ ದೀಪಗಳಿವೆ? (ಪ್ರತಿಯೊಬ್ಬರೂ ತಮ್ಮ ವಿಚಾರವನ್ನು ಹೇಳಿದರು). ಒಂದು ಅಂಧಕಾರವನ್ನು ದೂರ ಮಾಡಿ ಪ್ರಕಾಶಿತಗೊಳಿಸುವ ಮಣ್ಣಿನ ಸ್ಥೂಲ ದೀಪ ಇನ್ನೊಂದು ಆತ್ಮನ ದೀಪ, ಮೂರನೆಯದು ಕುಲದ ದೀಪ ಮತ್ತು ನಾಲ್ಕನೆಯದು ಯಾವುದು? ಆಶಾದೀಪ ಎಂದು ಹೇಳುತ್ತಾರಲ್ಲವೆ. ತಂದೆಗೆ ಮಕ್ಕಳಲ್ಲಿ ಆಶೆಯಿದೆ. ಈ ನಾಲ್ಕು ಪ್ರಕಾರದ ದೀಪಗಳ ಗಾಯನವಿದೆ. ಈಗ ಈ ನಾಲ್ಕು ದೀಪಗಳಲ್ಲಿ ಪ್ರತಿಯೊಬ್ಬರೂ ಎಷ್ಟು ದೀಪಗಳನ್ನು ಹಚ್ಚಿದ್ದೀರಿ? ಬಾಪ್ ದಾದಾರವರಿಗೆ ಮಕ್ಕಳ ಬಗೆಗೆ ಇರುವ ಆಶೆಗಳ ದೀಪ ಹಚ್ಚಿರುವಿರಾ? ಮಣ್ಣಿನ ದೀಪಗಳನ್ನು ಅನೇಕ ಜನ್ಮ ಹಚ್ಚಿರುವಿರಿ, ಆತ್ಮನ ದೀಪ ಹಚ್ಚಿರುವಿರಾ? ಈ ನಾಲ್ಕೂ ಪ್ರಕಾರದ ದೀಪಗಳು ಯಾವಾಗ ಬೆಳಗುತ್ತವೆಯೋ ಆಗ ದೀಪಾವಳಿ ಆಚರಿಸಿದಿರಿ ಎಂದು ತಿಳಿಯಿರಿ. ಕುಲದ ದೀಪ ನಂದಿ ಹೋಗುವಂತಹ ಯಾವುದೇ ಕೆಲಸ ಮಾಡಬೇಡಿ. ಮಕ್ಕಳಲ್ಲಿ ಬಾಪ್ ದಾದಾ ಬೆಳಗಿಸಿದ ಆಶೆಗಳ ದೀಪ ನಮ್ಮ ವ್ಯವಹಾರದಿಂದ ನಂದಿ ಹೋಗಬಾರದು. ಈ ಎಲ್ಲ ದೀಪಗಳು ಏಕರಸ ಮತ್ತು ಅಟಲ-ಅಡೋಲ ಆಗಿ ಬೆಳಗುತ್ತಿವೆಯೇ? ಯಾರ ದೀಪ ಬೆಳಗುತ್ತಿದೆಯೋ ಅವರು ಬೇರೆಯವರ ದೀಪವನ್ನು ಬೆಳಗದೇ ಇರಲಾರರು. ಬಾಪ್ ದಾದಾ ಅವರಿಗೆ ಮಕ್ಕಳಲ್ಲಿ ಮುಖ್ಯ ಯಾವ ಆಶೆಗಳಿವೆ? ಒಂದೊಂದು ಮಗುವೂ ಮೊದಲನೆಯ ನಂಬರನಲ್ಲಿ ಬರಲಿ ಎಂದರೆ ವಿಜಯಿರತ್ನವಾಗಲಿ ಎಂದು. ವಿಜಯಿರತ್ನಗಳ ಲಕ್ಷಣಗಳೇನು? (ಎಲ್ಲರೂ ತಮ್ಮ ವಿಚಾರವನ್ನು ಹೇಳಿದರು), ಏನನ್ನು ಕೇಳಿರುವಿರೋ ಅದನ್ನೇ ಹೇಳಿರುವಿರಿ ಆದ್ದರಿಂದ ಸರಿಯಾಗಿದೆ. ವಿಜಯಶಾಲಿಗಳು ತಾವೂ ವಿಜಯಿಯಾಗುವರು ಮತ್ತು ಬೇರೆಯವರನ್ನು ತಮಗಿಂತಲೂ ಹೆಚ್ಚು ವಿಜಯಶಾಲಿಗಳನ್ನಾಗಿ ಮಾಡುವರು. ಹೇಗೆ ಬಾಪ್ ದಾದಾ ಮಕ್ಕಳನ್ನು ತಮಗಿಂತಲೂ ಮುಂದೆ ಇಡುತ್ತಿದ್ದರೋ ಅದೇ ರೀತಿ ತಮ್ಮ ಸಂಗದ ರಂಗನ್ನು ಎಲ್ಲರಿಗೂ ಹಚ್ಚುವುದು ವಿಜಯಿರತ್ನಗಳಾಗುವವರ ಲಕ್ಷಣವಾಗಿದೆ. ಇಂತಹ ವಿಜಯಿರತ್ನಗಳು ವಿಜಯೀ ಮಾಲೆಯ ಯಾವ ನಂಬರನಲ್ಲಿ ಬರುತ್ತಾರೆ? ತಾವಂತೂ ವಿಜಯಿಯಾಗಿರುವಿರಿ ಆದರೆ ಬೇರೆಯವರು ತಮ್ಮ ಸಂಗದ ರಂಗಿನಿಂದ ವಿಜಯಿಗಳಾಗಬೇಕು. ಈ ಸೇವೆ ಇನ್ನೂ ಉಳಿದಿದೆ. ಕೋಟಿಯಲ್ಲಿ ಕೆಲವರು ಮಾತ್ರ ವಿಜಯಿಗಳಾಗುತ್ತಾರೆ ಎಂದಲ್ಲ ಆದರೆ ಯಾರು ಹೇಗಿದ್ದಾರೋ ಹಾಗೆಯೇ ಮಾಡುತ್ತಾರೆ. ಈ ರೀತಿ ಅನೇಕರನ್ನು ವಿಜಯಿಗಳನ್ನಾಗಿ ಮಾಡುವಂತಹ ವಿಜಯರತ್ನಗಳು ಮಾಲೆಯ ಮುಖ್ಯ ಮಣಿಗಳಾಗುತ್ತಾರೆ. ಆದ್ದರಿಂದ ವಿಜಯದ ಲಕ್ಷಣವಾಗಿದೆ ತಮ್ಮ ಸಮಾನ ವಿಜಯಿಗಳನ್ನಾಗಿ ಮಾಡುವುದು, ಕೇವಲ ತಾವಷ್ಟೇ ಆಗದೇ ಅನೇಕರನ್ನು ವಿಜಯಿಗಳನ್ನಾಗಿ ಮಾಡುವುದು, ಈಗ ಇದೇ ಸೇವೆ ಉಳಿದಿದೆ. ದೀಪಾವಳಿಯಲ್ಲಿ ಪೂರ್ಣ ದೀಪದ ಮಾಲೆ ಪ್ರಕಾಶಿಸುತ್ತಿರುತ್ತದೆ. ದೀಪಾವಳಿಯೆಂದು ಹೇಳುವಾಗ ಅನೇಕ ಪ್ರಕಾಶಿಸುತ್ತಿರುವ ದೀಪಗಳ ಮಾಲೆಯನ್ನು ಪ್ರತಿಯೊಬ್ಬರೂ ತಮ್ಮ ಕೊರಳಲ್ಲಿ ಹಾಕಿಕೊಂಡಿರುವಿರಾ? ಈ ರೀತಿ ಬೆಳಗುತ್ತಿರುವ ದೀಪಗಳ ಮಾಲೆಯನ್ನು ಪ್ರತಿಯೊಂದು ವಿಜಯಿರತ್ನ ಕೊರಳಲ್ಲಿ ಹಾಕಿಕೊಂಡಾಗ ವಿಜಯದ ನಗಾರಿ ಮೊಳಗುವುದು, ದಿವ್ಯಗುಣಗಳ ಮಾಲೆಯನ್ನು ತಮ್ಮ ಕೊರಳಲ್ಲಿ ಹಾಕಿ ಕೊಂಡಿರುವಿರಿ ಹಾಗೆಯೇ ಅನೇಕ ಬೆಳಗುತ್ತಿರುವ ದೀಪಗಳ ಮಾಲೆಯನ್ನು ತಮ್ಮ ಕೊರಳಲ್ಲಿ ಹಾಕಿಕೊಳ್ಳಿ, ಇಲ್ಲಿ ಎಷ್ಟು ದೀಪಗಳ ಮಾಲೆಗಳನ್ನು ಕೊರಳಲ್ಲಿ ಹಾಕಿಕೊಳ್ಳುವಿರೋ ಅಲ್ಲಿ ಅಷ್ಟು ಪ್ರಜೆಗಳಾಗುವರು. ಕೆಲವು ಮಾಲೆಗಳು ಬಹಳ ದೊಡ್ಡವಾಗಿರುತ್ತವೆ. ಇನ್ನು ಕೆಲವು ಕೊರಳಿಗಾಗುವಷ್ಟು ಚಿಕ್ಕದಾಗಿರುತ್ತವೆ. ಎಂತಹ ಮಾಲೆಯನ್ನು ಧರಿಸಬೇಕು? ಬಹಳ ದೊಡ್ಡದು. ಇಂತಹ ಮಾಲೆಯಿಂದ ತಮ್ಮ ಶೃಂಗಾರವನ್ನು ಮಾಡಿಕೊಳ್ಳಿ. ಇಲ್ಲಿಯವರೆಗೆ ಎಷ್ಟು ದೀಪಗಳ ಮಾಲೆಯನ್ನು ಹಾಕಿಕೊಂಡಿರುವಿರಿ? ಎಣಿಸಬಲ್ಲಿರಾ ಅಥವಾ ಅಗಣಿತವಾಗಿವೆಯೋ? ಮಿಣಿಮಿಣಿಯೆನ್ನುವ ದೀಪಗಳಿಗಿಂತ ಸರಿಯಾಗಿ ಬೆಳಗುತ್ತಿರುವಂತಹ ದೀಪಗಳು ಚೆನ್ನಾಗಿರುತ್ತವೆ. ಒಳ್ಳೆಯದು

ಮಧುಬನದ ಹೂಗಳಲ್ಲಿ ಯಾವ ವಿಶೇಷತೆಯಿರಬೇಕು? ಹೆಸರೇ ಮಧುಬನವಾಗಿದೆ. ಮೊದಲನೆಯ ವಿಶೇಷತೆಯಾಗಿದೆ ಮಧುರತೆ, ಮಧುರತೆಯಿಂದ ಎಂತಹವರನ್ನೂ ಹರ್ಷಿತಗೊಳಿಸಬಹುದು. ಮಧುರತೆಯನ್ನು ಧಾರಣೆ ಮಾಡಿಕೊಳ್ಳುವವರು ಇಲ್ಲಿಯೂ ಮಹಾನ್ ಆಗುವರು ಮತ್ತು ಅಲ್ಲಿಯೂ ಒಳ್ಳೆಯ ಪದವಿಯನ್ನು ಪಡೆಯುವರು. ಮಧುರತೆಯಿರುವವರನ್ನು ಎಲ್ಲರೂ ಮಹಾನ್ ರೂಪದಲ್ಲಿ ನೋಡುತ್ತಾರೆ. ಆದ್ದರಿಂದ ಈ ಮಧುರತೆಯೆಂಬ ವಿಶೇಷ ಗುಣವಿರಬೇಕು. ಮಧುರತೆಯಿಂದಲೇ ಮಧುಸೂದನನ ಹೆಸರನ್ನು ಪ್ರಸಿದ್ಧಗೊಳಿಸುವಿರಿ. ಮಧುಬನ ಹೆಸರಾಗಿದೆ. ಮಧು ಎಂದರೆ ಮಧುರತೆ ಮತ್ತು

ವನದಲ್ಲಿ ಯಾವ ವಿಶೇಷತೆಯಿರುತ್ತದೆ? ವನದಲ್ಲಿ ವೈರಾಗ್ಯ ವೃತ್ತಿಯವರು ಹೋಗುತ್ತಾರೆ. ಆದ್ದರಿಂದ ಬೇಹದ್ದಿನ ವೈರಾಗ್ಯ ಬುದ್ಧಿ ಬೇಕು ನಂತರ ಇದರಿಂದ ಎಲ್ಲಾ ಮಾತುಗಳು ಬರುವವು, ಮತ್ತು ತಮ್ಮೆಲ್ಲರನ್ನು ಅನುಕರಣೆ ಮಾಡಲು ಇಲ್ಲಿ ಬರುವರು. ಇವರು ಹೇಗೆ ಹೀಗಾದರು ಎಂದು ಎಲ್ಲರೂ ಯೋಚಿಸುವರು. ಮಧುಬನ ಎಂದರೆ ಮಧುಬನವೇ ಎಂದು ಎಲ್ಲರ ಮುಖದಿಂದಲೂ ಬರುವುದು. ಆದ್ದರಿಂದ ಮಧುರತೆ ಮತ್ತು ಬೇಹದ್ದಿನ ವೈರಾಗ್ಯ ವೃತ್ತಿ ಎಂಬ ಈ ಎರಡು ವಿಶೇಷತೆಗಳನ್ನು ಧಾರಣೆ ಮಾಡಿಕೊಳ್ಳಿ, ಬೇರೆ ಶಬ್ದಗಳಲ್ಲಿ ಸ್ನೇಹ ಮತ್ತು ಶಕ್ತಿ ಎಂದೂ ಹೇಳಬಹುದು. ಎಲ್ಲರೊಂದಿಗೆ ಎಲ್ಲರಿಗಿಂತ ಹೆಚ್ಚು ಸ್ನೇಹವಿದೆಯಲ್ಲವೇ? ಬಾಪ್ ದಾದಾರವರಿಗೂ ಮಧುಬನದವರೊಂದಿಗೆ ವಿಶೇಷ ಸ್ನೇಹವಿರುತ್ತದೆ ಏಕೆಂದರೆ ಹೇಗಿದ್ದರೂ ಸರ್ವಸ್ವ ತ್ಯಾಗಿಗಳಾಗಿದ್ದಾರೆ. ಆದ್ದರಿಂದ ಆಕರ್ಷಣೆ ಮಾಡುತ್ತಾರೆ. ಆದರೆ ಸರ್ವಸ್ವ ತ್ಯಾಗಿಯ ಜೊತೆಗೆ ಈಗ ಸ್ನೇಹ ಮತ್ತು ಶಕ್ತಿಯನ್ನೂ ತುಂಬಿಕೊಳ್ಳಬೇಕು. ಯಾವ ವಿಶೇಷತೆಯನ್ನು ತುಂಬಿಕೊಳ್ಳಬೇಕೆಂದು ತಿಳಿಯಿತೇ?

ಕುಮಾರಿಯರು ಅದ್ಭುತ ಮಾಡಿ ತೋರಿಸಬೇಕು. ಕುಮಾರಿಯರ ಪ್ರತಿ ಕರ್ತವ್ಯ, ಸಂಕಲ್ಪ, ಮಾತು ಮತ್ತು ಕರ್ಮ ಅದ್ಭುತವಾಗಿರಬೇಕು. ಕುಮಾರಿಯರು ಪವಿತ್ರರಾಗಿರುವ ಕಾರಣ ತಮ್ಮ ಧಾರಣೆಯನ್ನು ತೀವ್ರಗೊಳಿಸಿಕೊಳ್ಳಬಹುದು. ಇವರ ಕರ್ತವ್ಯ ಅಮೋಘವಾಗಿದೆ ಎಂದು ಎಲ್ಲರ ಮುಖದಿಂದ ಬರಬೇಕು ಆ ರೀತಿ ಅದ್ಭುತವಾದ ಕರ್ತವ್ಯ ಮಾಡಿ ತೋರಿಸಬೇಕು. ಇಂದಿನ ಮುರಳಿ ಅಮೋಘವಾಗಿತ್ತೆಂದು ಬಾಪ್ ದಾದಾ ಅವರ ಪ್ರತಿಯೊಂದು ಮಹಾವಾಕ್ಯಗಳನ್ನು ಕೇಳಿದಾಗ ಹೇಳುವಂತೆ ಕುಮಾರಿಯರ ಪ್ರತಿಯೊಂದು ಕರ್ಮ ಅದ್ಭುತವಾಗಿರಬೇಕು. ಬಾಪ್ ದಾದಾ ಅವರನ್ನು ಅನುಕರಣೆ ಮಾಡಬೇಕು. ಪ್ರಯತ್ನ ಮಾಡುವೆವು ಎಂದು ಹೇಳಬಾರದು. ಎಲ್ಲಿಯವರೆಗೆ ಪ್ರಯತ್ನ ಮಾಡುವುದಿಲ್ಲವೋ ಅಲ್ಲಿಯವರೆಗೆ ಆಕರ್ಷಣಾ ಮೂರ್ತಿಯಾಗುವುದಿಲ್ಲ. ಆಕರ್ಷಣೆಯ ಶಕ್ತಿಯನ್ನು ಧಾರಣೆ ಮಾಡಿಕೊಳ್ಳಬೇಕಾದರೆ ಪ್ರಯತ್ನ ಎಂಬ ಶಬ್ದವನ್ನು ಸಮಾಪ್ತಿಗೊಳಿಸಿ, ಈಗ ಆಕರ್ಷಣೆಯ ರೂಪವಾಗಬೇಕು. ಬಾಪ್ ದಾದಾ ಎಂದಾದರೂ ಪ್ರಯತ್ನ ಮಾಡುತ್ತೇವೆಂದು ಹೇಳುತ್ತಿದ್ದರೆ? ಹಾಗಾದರೆ ಪ್ರಯತ್ನ ಮಾಡುತ್ತೇವೆಂದು ನೀವೇಕೆ ಹೇಳುತ್ತೀರಿ? ಕುಮಾರಿಯರು ಅದ್ಭುತ ಮಾಡಿದರೆ ಜೊತೆಗಾರ ಜೊತೆಗಿರುವನು, ಇಲ್ಲವಾದರೆ ಜೊತೆಗಾರ ಸಾಕ್ಷಿಯಾಗಿರುವನು ಆದ್ದರಿಂದ ಜೊತೆಗಾರನನ್ನು ಜೊತೆಗಿಟ್ಟುಕೊಳ್ಳಿ. ಇಲ್ಲವಾದರೆ ಸಾಕ್ಷಿಯಾಗುವನು. ಸಾಕ್ಷಿಯಾಗಿರುವುದು ಚೆನ್ನಾಗಿರುವುದೋ ಅಥವಾ ಸಾಥಿಯಾಗಿರುವುದೋ? ಯಾರು ಪರಿಶ್ರಮ ಪಡುತ್ತಾರೆಯೋ ಅದರ ಫಲವೂ ಇಲ್ಲಿಯೇ ಸಿಗುತ್ತದೆ. ಇಲ್ಲಿ ಸ್ನೇಹ ಮತ್ತು ಭವಿಷ್ಯ ಪದವಿ ಸಿಗುತ್ತದೆ. ಎಲ್ಲರಿಗೂ ಸ್ನೇಹಿಯಾಗಲು ಪ್ರಯತ್ನ ಪಡಬೇಕು. ಯಾರು ಎಷ್ಟು ಪರಿಶ್ರಮಪಡುವರೋ ಅವರು ಅಷ್ಟೇ ಸ್ನೇಹಿಯಾಗುವರು. ಸಮಯ ಬಂದಾಗ ಸ್ನೇಹಿಯ ನೆನಪಾಗುವುದು. ಕೆಲವು ಮಾತುಗಳಲ್ಲಿ ಪರಿಶ್ರಮ ನೆನಪಾಗುವುದು, ತಂದೆ ಏಕೆ ನೆನಪಾಗುತ್ತಾರೆ? ಪರಿಶ್ರಮ ಮಾಡಿದ ಕಾರಣ ಸ್ನೇಹವಿದೆ. ಪರಿಶ್ರಮದಿಂದ ಸ್ನೇಹಿಯಾಗುವುದು. ಎಷ್ಟು ಹೆಚ್ಚು ಪರಿಶ್ರಮವೋ ಅಷ್ಟು ಸರ್ವರ ಸ್ನೇಹಿ ಆಗುವಿರಿ, ಪರಿಶ್ರಮದ ಫಲವೇ ಸ್ನೇಹವಾಗಿದೆ. ಯಾರು ಪರಿಶ್ರಮ ಮಾಡುತ್ತಾರೋ ಅವರನ್ನು ಎಲ್ಲರೂ ಸ್ನೇಹದ ದೃಷ್ಟಿಯಿಂದ ನೋಡುತ್ತಾರೆ ಇಲ್ಲವಾದರೆ ಇಲ್ಲ. ವಿದ್ಯಾರ್ಥಿ ಶಿಕ್ಷಕನ ಗುಣಗಳನ್ನು ಅವಶ್ಯವಾಗಿ ಧಾರಣೆ ಮಾಡಿಕೊಳ್ಳಬೇಕು. ಸ್ನೇಹವೇ ಸಂಪೂರ್ಣ ಮಾಡುತ್ತದೆ. ಸ್ನೇಹದ ಜೊತೆಗೆ ಮತ್ತೆ ಶಕ್ತಿಯೂ ಬೇಕು. ಎರಡರ ಮಿಲನವಾದಾಗ ಸ್ನೇಹ ಮತ್ತು ಶಕ್ತಿಯ ಸ್ಥಿತಿ ಅತಿ ಪ್ರಿಯ ಮತ್ತು ನಿರ್ಲಿಪ್ತವಾಗಿರುತ್ತದೆ. ಯಾರೊಂದಿಗೆ ಸ್ನೇಹವಿದೆಯೋ ಅವರ ಸಮಾನವಾಗಬೇಕು. ಇದೇ ಸ್ನೇಹದ ಪ್ರಮಾಣವಾಗಿದೆ. ಎಲ್ಲಿಯವರೆಗೆ ನಾವು ಸಮಾನತೆಯಲ್ಲಿ ಸಮೀಪ ಬಂದಿದ್ದೇವೆ ಎಂದು ತಮ್ಮನ್ನು ಪರೀಕ್ಷಿಸಿಕೊಳ್ಳಿ. ಎಷ್ಟೆಷ್ಟು ಸಮಾನತೆಯಲ್ಲಿ ಸಮೀಪವಾಗುವಿರೋ ಅಷ್ಟು ಕರ್ಮಾತೀತ ಸ್ಥಿತಿಗೆ ಸಮೀಪವಿರುವಿರಿ ಎಂದು ತಿಳಿದುಕೊಳ್ಳಿ. ಇದೇ ಸಮಾನತೆಯ ಮಾಪನವಾಗಿದೆ. ತಮ್ಮ ಕರ್ಮಾತೀತ ಸ್ಥಿತಿಯನ್ನು ಪರೀಕ್ಷಿಸಿಕೊಳ್ಳಬೇಕು. ಕೇವಲ ಸ್ನೇಹವಿಟ್ಟುಕೊಳ್ಳುವುದರಿಂದ ಸಂಪೂರ್ಣರಾಗುವುದಿಲ್ಲ. ಸ್ನೇಹದ ಜೊತೆಗೆ ಶಕ್ತಿಯಿದ್ದಾಗ ತಾವೂ ಸಂಪೂರ್ಣರಾಗಿ ಬೇರೆಯವರನ್ನೂ ಸಂಪೂರ್ಣ ಮಾಡುವಿರಿ. ಏಕೆಂದರೆ ಶಕ್ತಿಯಿಂದ ಆ ಸಂಸ್ಕಾರಗಳು ತುಂಬುತ್ತವೆ. ಆದ್ದರಿಂದ ಈಗ ಸ್ನೇಹದ ಜೊತೆಗೆ ಶಕ್ತಿಯನ್ನೂ ತುಂಬಿಕೊಳ್ಳಿ.

ಎಲ್ಲರ ಹೃದಯದ ಮೇಲೆ ವಿಜಯವನ್ನು ಯಾವ ಗುಣಗಳಿಂದ ಪಡೆಯುತ್ತೀರಿ? (ಎಲ್ಲರನ್ನು ಸಂತುಷ್ಟ ಮಾಡಿ), ತಂದೆಯಲ್ಲಿ ಈ ವಿಶೇಷ ಗುಣವಿತ್ತು, ಅದನ್ನೇ ಅನುಸರಿಸಿ. ಎಲ್ಲರೂ ಮಧುಬನದ ಲಿಸ್ಟನಲ್ಲಿರುವಿರೋ ಅಥವಾ ಆಲ್ ರೌಂಡರ್ ನ ಲಿಸ್ಟ್ ನಲ್ಲೋ? ಒಂದು ಹದ್ದಿನದು ಇನ್ನೊಂದು ಬೇಹದ್ದಿನದು. ಆಲ್ ರೌಂಡರ್ ಮತ್ತು ಸದಾಸಿದ್ಧ(allrounder ಮತ್ತು ever ready) ಈ ಲಿಸ್ಟಿನಲ್ಲಿ ಬರಬೇಕಾದರೆ ಏನು ಮಾಡಬೇಕೆಂದು ಗೊತ್ತಿದೆಯೇ? ಒಂದು ಕ್ಷಣದಲ್ಲಿ ಸಿದ್ಧ. ಸಂಕಲ್ಪಗಳನ್ನೂ ಒಂದು ಕ್ಷಣದಲ್ಲಿ ಸಮಾವೇಶಗೊಳಿಸುವುದು, ಮಿಲಿಟರಿಯವರ ಸಾಮಾನು ಯಾವಾಗಲೂ ಸಿದ್ಧವಾಗಿರುತ್ತದೆ. ಅದೇ ರೀತಿ ಸದಾ ಸಿದ್ಧರಾಗಿರುವವರ ಸಂಕಲ್ಪಗಳ ಬೆಡ್ಡಿಂಗ್ ತಯಾರಾಗಿರಬೇಕು. ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಪೆಟ್ಟಿಗೆ ಮತ್ತು ಬೆಡ್ಡಿಂಗ್ (ಹಾಸಿಗೆ) ಸದಾ ಸಿದ್ಧವಾಗಿರಬೇಕು.

ಆತ್ಮಿಕ ಮಕ್ಕಳೇ, ವಾಣಿಯಿಂದ ದೂರವಾಗಿರುವ ತಮ್ಮ ಮನೆಗೆ ಹೋಗುವ ಪುರುಷಾರ್ಥ ಮಾಡಬೇಕು. ಆದ್ದರಿಂದ ಈ ಹಳೆಯ ಪ್ರಪಂಚದಲ್ಲಿರುತ್ತಿದ್ದರೂ ದೇಹ ಮತ್ತು ದೇಹದ ಸಂಬಂಧಗಳಿಂದ ಉಪರಾಮ ಚಿತ್ತರಾಗಬೇಕು. ಪತಿತ ಜಗತ್ತಿನಲ್ಲಿ ಇರುತ್ತಿದ್ದರೂ ತಂದೆ ಪವಿತ್ರರಾಗುವ ಶಕ್ತಿಯನ್ನು ಕೊಡುತ್ತಾರೆ. ಪುರುಷಾರ್ಥ ಮಾಡಿ ನೀವು ಸದಾ ಪವಿತ್ರರಾಗಿರಿ. ಮಕ್ಕಳೇ ಸದಾ ಗುಣಗ್ರಾಹಕರಾಗಿ, ಸ್ತುತಿ-ನಿಂದೆ, ಲಾಭ- ಹಾನಿ, ಜಯ-ಪರಾಜಯ ಎಲ್ಲದರಲ್ಲೂ ಸಂತುಷ್ಟರಾಗಿ ನಡೆಯಬೇಕು ಮತ್ತು ದಯಾಹೃದಯಿಗಳು ಆಗಬೇಕು. ಒಳ್ಳೆಯದು.

ಅವ್ಯಕ್ತ ಮುರಳಿ 09-11-1969.

***ಭವಿಷ್ಯವನ್ನು ತಿಳಿಯುವ ಯುಕ್ತಿಗಳು***

ಆತ್ಮಿಕ ಸ್ಥಿತಿಯಲ್ಲಿ ಇದ್ದು ಮನನ ಚಿಂತನೆ ಮಾಡಿ ಧಾರಣೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನಾತ್ಮ ಮಾಸ್ಟರ್ ಸರ್ವಶಕ್ತಿವಂತನು ಶಿವ ಪರಮಾತ್ಮ ನನ್ನ ತಂದೆ.

1. ನಾನು ಭವಿಷ್ಯವನ್ನು ಸ್ಪಷ್ಟವಾಗಿ ತಿಳಿದುಕೊಂಡಿರುವ ತ್ರಿಕಾಲ ದರ್ಶಿ ಸ್ವರೂಪ.

2. ನಾನು ಯೋಗಯುಕ್ತ ಸ್ಥಿತಿಯಿಂದ ಭವಿಷ್ಯವನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ.

3. ನಾನು ಸಾಕಾರ ತಂದೆಯ ಸಮಾನ ನನ್ನ ಭವಿಷ್ಯ, ನಾಮ, ರೂಪ, ದೇಶ, ಕಾಲ ಮತ್ತು ಸಂಬಂಧಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದೇನೆ.

4. ನಾನು ನನ್ನ ನಡೆ-ನುಡಿ ಮತ್ತು ಪುರುಷಾರ್ಥದಿಂದ ನನ್ನ ಭವಿಷ್ಯ ಚಿತ್ರವನ್ನು ಪ್ರಸಿದ್ಧಿ ಮಾಡಿದ್ದೇನೆ.

5. ನಾನು ಅನೇಕರ ಸಂಬಂಧವನ್ನು ಒಬ್ಬ ತಂದೆಯೊಂದಿಗೆ ಜೋಡಿಸುವ ಅಲೌಕಿಕ ದೀಪಾವಳಿಯನ್ನು ಆಚರಿಸಿಕೊಂಡಿದ್ದೇನೆ.

6. ನಾನು ನಾಲ್ಕು ಪ್ರಕಾರದ ದೀಪಗಳನ್ನು (ಮಣ್ಣಿನ ದೀಪ, ಆತ್ಮನ ದೀಪ, ಕುಲದೀಪ, ಆಶಾದೀಪ) ಬೆಳಗಿಸಿ ಸತ್ಯ ದೀಪಾವಳಿಯನ್ನು ಆಚರಿಸಿದ್ದೇನೆ.

7. ನಾನು ಸಂಲಗ್ನತೆ ಎಂಬ ಅಗ್ನಿಯಿಂದ ಸದಾ ಬೆಳಗುತ್ತಿರುವ ಆಶಾದೀಪ.

8. ನಾನು ಏಕರಸ, ಅಚಲ ಮತ್ತು ಅಡೋಲ (ಸ್ಥಿರವಾಗಿರುವ) ದೀಪ.

9. ನಾನು ಮೊದಲ ನಂಬರ್ ನಲ್ಲಿ ಬರುವ ವಿಜಯೀ ರತ್ನ.

10. ನಾನು ಸ್ವಯಂ ವಿಜಯವನ್ನು ಹೊಂದಿ ಇತರ ಆತ್ಮರನ್ನು ನನಗಿಂತ ಮೊದಲೇ ವಿಜಯಶಾಲಿಗಳನ್ನಾಗಿ ಮಾಡುವ ಮಾಲೆಯ ಮುಖ್ಯಮಣಿ.

11. ನಾನು ನನ್ನ ಸಾಂಗತ್ಯದ ಬಣ್ಣವನ್ನು ಇತರರಿಗೆ ಹಚ್ಚುವ ವಿಜಯೀ ರತ್ನ.

12. ನಾನು ಲೆಕ್ಕವಿಲ್ಲದಷ್ಟು ಬೆಳಗಿರುವ ದೀಪದ ಮಾಲೆಯನ್ನು ಧರಿಸಿರುವ ಶೃಂಗರಿತ ಸ್ವರೂಪ.

13. ನಾನು ಮಧುರತೆಯಿಂದ ಮಧುಸೂದನನ್ನು ಪ್ರಸಿದ್ಧಿಗೊಳಿಸಿದ್ದೇನೆ.

14. ನಾನು ಮಧುರತೆ ಮತ್ತು ಬೇಹದ್ ವೈರಾಗ್ಯ ಬುದ್ಧಿ (ಸ್ನೇಹ ಮತ್ತು ಶಕ್ತಿ) ಯನ್ನು ಧಾರಣೆ ಮಾಡಿರುವ ಮಧುಬನ ನಿವಾಸಿ.

15. ನಾನು ಸರ್ವರನ್ನು ಆಕರ್ಷಿಸುವ ಸರ್ವಸ್ವ ತ್ಯಾಗಿ, ಸ್ನೇಹ ಮತ್ತು ಶಕ್ತಿ ಸ್ವರೂಪ.

16. ನಾನು ಪ್ರತಿಯೊಂದು ಕರ್ಮವನ್ನು ಅದ್ಭುತವಾಗಿ ಮಾಡುವ ಬಾಪ್ ಸಮಾನ ಸ್ವರೂಪ.

17. ನಾನು ಪ್ರಯತ್ನ ಎಂಬ ಮಾತನ್ನು ಸಮಾಪ್ತಿ ಮಾಡಿ ಬಾಪ್ ದಾದಾರವರನ್ನು ಸಾಥಿ(ಜೊತೆ) ಮಾಡಿಕೊಂಡಿರುವ ಆಕರ್ಷಣಾಮೂರ್ತಿ.

18. ನಾನು ಸ್ನೇಹ ಮತ್ತು ಶಕ್ತಿಯ ಮಿಲನದ ಸ್ಥಿತಿಯಿಂದ ಅತೀತ ಮತ್ತು ಅತಿಪ್ರಿಯವಾಗಿದ್ದೇನೆ.

19. ನಾನು ಶಿವ ತಂದೆಯ ಸಮಾನ ತಯಾರಾದ ಸ್ನೇಹದ ಪ್ರತ್ಯಕ್ಷ ಸ್ವರೂಪ.

20. ನಾನು ಬ್ರಹ್ಮಾ ತಂದೆಯ ಸಮಾನ ಕರ್ಮಾತೀತ ಸ್ವರೂಪ.

21. ನಾನು ಬ್ರಹ್ಮಾ ತಂದೆಯನ್ನು ಅನುಸರಿಸುತ್ತಾ... ಎಲ್ಲರನ್ನು ಸಂತುಷ್ಟ ಪಡಿಸುವ ವಿಶೇಷ ಗುಣದಾರಿ.

22. ನಾನು ಆಲ್ರೌಂಡರ್ ಮತ್ತು ಎವರೆಡಿ ಸ್ವರೂಪ.

23. ನಾನು ವಾಣಿಯಿಂದ ಅತೀತ ಸ್ಥಿತಿಯಲ್ಲಿ ಇರುತ್ತಾ ಸರ್ವರನ್ನೂ ಅತೀತ ಸ್ಥಿತಿಗೆ ಕೊಂಡೊಯ್ಯುವ ಪುರುಷಾರ್ಥವನ್ನು ಮಾಡುವ ಪವಿತ್ರ ಸ್ವರೂಪ.

24. ನಾನು ಗುಣಗ್ರಾಹಕನು.

25. ನಾನು ಸ್ತುತಿ-ನಿಂದೆ, ಲಾಭ-ಹಾನಿ, ಜಯ-ಪರಾಜಯ ಎಲ್ಲದರಲ್ಲೂ ಏಕರಸದಿಂದ ಇರುವ ಸಂತುಷ್ಟ ಸ್ವರೂಪ.

26. ನಾನು ದಯಾ ಹೃದಯ ಸ್ವರೂಪ.